ಪಿಡಬ್ಲ್ಯೂಃ 02
ದಿನಾಂಕಃ 23-07-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದ

ಪಂಚನಾಮೆಯನ್ನು ದಿ 9-07-2015 ರಂದು ಮದ್ಯಾಹ್ನ 3 ರಿಂದ 4-30 ಗಂಟೆಗೆ ವರೆಗೆ ಮಾಡಿದ್ದೇನೆ. ಆನಂತರ ಪೊಲೀಸಠಾಣೆಗೆ ಬಂದು ಪಿರ್ಯಾದಿಯನ್ನು ಸಲ್ಲಿಸಿದ್ದೇನೆ. ಪಿರ್ಯಾದಿಯನ್ನು ಸಲ್ಲಿಸಲು ಪೊಲೀಸಠಾಣೆಗೆ ಹೋದಾಗ 4-30 ರಿಂದ 5-00 ಗಂಟೆಯಾಗಿತ್ತು. ದೂರನ್ನು ಪೊಲೀಸಠಾಣೆಯಲ್ಲಿ ನಾನೇ ಬರೆದುಕೊಟ್ಟಿದ್ದೇನೆ . ದೂರನ್ನು 1 ಗಂಟೆ ಅವಧಿಯಲ್ಲಿ ಬರೆದಿದ್ದೇನೆ. ಪಿರ್ಯಾದಿಯನ್ನು ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಿದ್ದೇನೆ. ತಾಲೂಕಾ ಆಸ್ಪತ್ರೆಯ ಕಂಪ್ಯೂಟರ್ ಆಪ್ರೇಟರ ಮೂಲಕ ಪಿರ್ಯಾದಿಯನ್ನು ಬೆರಳಚ್ಚು ಮಾಡಿಸಿದ್ದೇನೆ. ಪೊಲೀಸ ಠಾಣೆಯಲ್ಲಿ ಪಿರ್ಯಾದಿಯನ್ನು ಸಲ್ಲಿಸಿದಾಗ 5-30 ರಿಂದ 6-00 ಗಂಟೆಯಾಗಿತ್ತು. ನಾನು ದಿ-10-07-2015 ರಂದು ಯಾವುದೇ ಪಿರ್ಯಾದಿಯನ್ನು ಸಲ್ಲಿಸಿಲ್ಲ. ಅರೋಪಿಯ ವಿರುದ್ಧ ಬಂದ ದೂರಿನ ಅರ್ಜಿಗಳನ್ನು ಈ ಪ್ರಕರಣದಲ್ಲಿ ತಾಲೂಕಾ ಅಧಿಕಾರಿಗಳು ಹಾಜರು ಪಡಿಸಿದ್ದಾರೆ. ನಾನು ಅರೋಪಿಯ ಆಸ್ಪತ್ರೆಯ ಒಳಗೆ ಹೋದಾಗ ಒಂದು 60 ವಯಸ್ಸಿನ ಮೇಹರುನಿಸ್ಸಾ ಎಂಬ ಅಜ್ಜಿಯನ್ನು ಪರೀಕ್ಷೆ ಮಾಡುತ್ತಿದ್ದರು. ಸದರಿ ಅಜ್ಜಿಯನ್ನು ಅರೊಪಿ ಪರೀಕ್ಷೆ ಮಾಡುತ್ತಿದ್ದರು. ಸದರಿ ಅಜ್ಜಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವ ಸಲುವಾಗಿ ಪ್ರಯೋಗಾಲಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಅರೋಪಿ ಸದರಿ ಅಜ್ಜಿಯನ್ನು ಪರೀಕ್ಷೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿಯಲ್ಲ. ಅರೋಪಿ ಸದರಿ ಆಸ್ಪತ್ರೆಯ ಮಾಲೀಕರು ಎಂದರೆ ಸರಿ. ಖಾಸಗಿ ಆಸ್ಪತ್ರೆಯಲ್ಲಿ ಖಾಸಗಿ ವೈದ್ಯರ ಮುಖಾಂತರ ಆಸ್ಪತ್ತೆಯನ್ನು ನಡೆಸಬಹುದು ಎಂದರೆ ಸರಿ. ಅರೋಪಿ ತನ್ನ ಆಸ್ಪತ್ರೆಯಲ್ಲಿ ಸವಿತಾ ಹೊಂಬಾಳೆ ಎನ್ನುವವರನ್ನು ಡಾಕ್ಟರ ಎಂದು ನೇಮಿಸಿಕೊಂಡಿದ್ದರು ಎಂದರೆ ಸರಿ. ಹೊರಗಡೆಯಿಂದ ಬರುವ ತಜ್ಞ ವೈದ್ಯರ ಬೇಟಿ ನೀಡಿದ ಕುರಿತು ಮತ್ತು ರೋಗಿಗಳಿಗೆ ಚಿಕಿತ್ಸೆ ನೀಡಿದ ಬಗ್ಗೆ ತಮ್ಮ ಔಷಧಗಳನ್ನು ಅಲ್ಲೆ ಇಟ್ಟು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಅರೋಪಿಯ ಮಾಲಿಕತ್ವದ ಒಂದು ನರ್ಸಿಂಗ್ ಹೋಂ ಇದೆ ಎಂದರೆ ಸರಿ. ಸದರಿ ನರ್ಸಿಂಗ್ ಹೊಂಗೆ ಡಾಕ್ಟರನ್ನು ಅರೋಪಿ ನೇಮಿಸಿಕೊಳ್ಳಬಹುದು ಎಂದರೆ ಸರಿ. ಅರೋಪಿಯ ಆಸ್ಪತ್ರೆಗೆ ಬೇರೆ ಬೇರೆ ತಜ್ಞ ವೈದ್ಯರು ಬೇಟಿ ನೀಡುವ ಕುರಿತು ದಾಖಲೆಯನ್ನು ಡಿ ಹೆಚ್ ಓ ಇವರ ಕಚೇರಿಗೆ ಸಲ್ಲಿಸಿರುತ್ತಾರೆಂದರೆ ಸರಿ. ಆ ಎಲ್ಲಾ ಮಾಹಿತಿ ಡಿ ಹೆಚ್ ಓ ಇವರ ಬಳಿ ಇರುತ್ತದೆ ಎಂದರೆ ಸರಿ. ಅರೋಪಿಯ ಕ್ಲಿನಿಕನಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ ವೈದ್ಯರ ಪಟ್ಟಿಯನ್ನು ಡಿ ಹೆಚ್ ಓ ಹಾವೇರಿ

ಇವರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ಪಟ್ಟಿಯಲ್ಲಿರುವ ವೈದ್ಯರುಗಳಿಗೆ ಸೇವೆ ಸಲ್ಲಿಸಲು ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ವೈದ್ಯರ ಪಟ್ಟಿಯನ್ನು ಡಿ ಹೆಚ್ ಓ ಇವರ ಬಳಿ ಕಳುಹಿಸುವಾಗ ವೈದ್ಯರುಗಳಿಗೆ ಸೇರಿದ ಪ್ರಮಾಣ ಪತ್ರಗಳನ್ನು ಸಹ ಪಟ್ಟಿಯೊಂದಿಗೆ ಕಳುಹಿಸಿರುತ್ತಾರೆ ಎಂದರೆ ಸರಿ.. ಸಾಕಷ್ಟು ವೈದ್ಯರು ಅರೋಪಿಯ ಕ್ಲಿನಿಕ್‌ಗೆ ಬೇಟಿ ನೀಡುತ್ತಿದ್ದರಿಂದ ಅರೋಪಿಯ ಕ್ಲಿನಿಕ ಬಹಳ ದೊಡ್ಡ ಹೆಸರು ಗಳಿಸಿದೆ ಎಂದರೆ ನನಗೆ ಗೊತ್ತಿಲ್ಲಾ. ಆ ದಿನ ನಾವು ಆಸ್ಪತ್ರೆಗೆ ಬೇಟಿ ನೀಡಿದಾಗ ಅರೋಪಿಯನ್ನು ಬಿಟ್ಟು ಬೇರೆ ಯಾರೂ ವೈದ್ಯರು ಇರಲಿಲ್ಲ. ಆ ದಿನ ಆಸ್ಪತ್ರೆಯೊಳಗೆ ಹೋದಾಗ ಅರೋಪಿ ಒಬ್ಬ ಅಜ್ಜಿಯನ್ನು ತನ್ನ ಪಕ್ಕದಲ್ಲಿ ಕುಡಿಸಿಕೊಂಡು ಪರೀಕ್ಷೆ ಮಾಡುತ್ತಿದ್ದರು. ನಾವು ಆಸ್ಪತ್ರೆಗೆ ಬೇಟಿ ನೀಡಿದಾಗ ಅಲ್ಲಿ ಯಾರೂ ರೋಗಿಗಳು ಇರಲಿಲ್ಲ ಅರೋಪಿ ಯಾರನ್ನು ಪರೀಕ್ಷೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅರೋಪಿ ಸದರಿ ಮೇಹರುನಿಸ್ಸಾ ಅಥವಾ ಬೇರೆಯವರಿಂದ ಹಣ ತೆಗೆದುಕೊಂಡಿದ್ದನ್ನು ನಾನು ನೋಡಿಲ್ಲಾ. ಆ ದಿನ ನಾವು ಅರೋಪಿಯ ಜೇಬನ್ನು ತಪಾಸಣೆ ಮಾಡಿಲ್ಲಾ. ಅರೋಪಿ ಬರೆದುಕೊಟ್ಟಿದ್ದಾನೆಂದು ಹೇಳಿದ ಔಷಧ ಚೀಟಿಯನ್ನು ನಾನು ನೋಡಿಲ್ಲಾ. ತಾಲೂಕ ವೈದ್ಯಾಧಿಕಾರಿಗಳು ಮತ್ತು ನಾನು 12-00 ಗಂಟೆಗೆ ಸಮಯದಲ್ಲಿ ಅರೋಪಿಯ ಕ್ಲಿನಿಕನಲ್ಲಿದ್ದೇವು. ನಮ್ಮಗಿಂತ ಮೊದಲು ಉಪವಿಭಾಗಾಧಿಕಾರಿ ರೇಡ್ ಮಾಡಿ ದಾಖಲೆಯನ್ನು ತಯಾರಿಸಿ ಇಟ್ಟಿದ್ದರು ಎಂದರೆ ಸರಿಯಲ್ಲ. ಅರೊಪಿ ಮತ್ತು ಉಪವಿಭಾಗಾಧಿಕಾರಿ ನಡುವೆ ಒಂದು ಮಸೀದಿ ಲೆಕ್ಕ ಪತ್ರದ ಕುರಿತು ದ್ವೇಷ ಇದುದರಿಂದ ಈ ರೇಡನ್ನು ನಮ್ಮ ಮುಖಾಂತರ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಅರೋಪಿಯ ವಿರುದ್ಧ ಸಾರ್ವಜನಿಕರಿಂದ ಯಾವುದೇ ದೂರು ಬಂದಿರಲಿಲ್ಲ ಎಂದರೆ ಸರಿಯಲ್ಲ. 10 ನೇ ತಾರೀಕನಂದು ಡಿ ಹೆಚ್ ಓ ಸವಣೂರಿಗೆ ಬಂದಿದ್ದರು. ಯಾವ ಊರಿನಲ್ಲಿ ಯಾವ ಆಸ್ಪತ್ರೆಗಳು ಹೆಸರು ವಾಸಿ ಆಗಿರುತ್ತವೆ ಅವುಗಳ ಎಲ್ಲದರ ಬಗ್ಗೆ ಡಿ ಹೆಚ್ ಓ ಗಳಿಗೆ ಮಾಹಿತಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೆ ಪಿ ಎಮ್ ಇ ಕಾಯ್ದೆ ಅಡಿ ನೊಂದಣಿ ಆದ ಅಸ್ಪತ್ರೆಗಳ ಬಗ್ಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನೊಂದಣಿ ಆದ ಆಸ್ಪತ್ರೆಗಳಲ್ಲಿ ಏನಾದರೂ ನ್ಯೂನತೆ ಕಂಡು ಬಂದಲ್ಲಿ ಅವುಗಳನ್ನು ಸರಿ ಪಡಿಸುವಂತೆ ಶೊಕಾಶ ನೊಟಿಸ್ಸ ಕೊಡಬೇಕೆಂದರೆ ಸರಿ. ಅರೊಪಿಗೆ ನಾನು ಯಾವುದೇ ನೊಟಿಸ್ಸನ್ನು ನೀಡಿಲ್ಲ. ದಿ-09-07-2015 ರಂದು ನಾನು ಸವಣೂರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 09-07-2015 ರಂದು ಯಾವುದೇ ದೂರನ್ನು ಕೊಟ್ಟಿಲ್ಲಾ ಎಂದರೆ ಸರಿಯಲ್ಲ. ನನಗೆ ಉಪ ವಿಭಾಗಾಧಿಕಾರಿ ಹೇಳಿದ್ದರಿಂದ 10 ನೇ ತಾರೀಕದಂದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅರೋಪಿಯ ಹೆಸರನ್ನು ಕೆಡಿಸುವ ಉದ್ದೇಶದಿಂದ ಅರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಎ ಸಿ ಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.**

ಅಪರಾಧ ಸಂಖ್ಯೆ: 297/2016

ಪಿಡಬ್ಲ್ಯೂ: 03 ಸಿಡಬ್ಲ್ಯೂ : 02
ದಿನಾಂಕ: 23-07-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿದಾರರ ಹೆಸರು - ಫಕ್ಕೀರಪ್ಪ ಅರಳಿ
ತಂದೆ/ಗಂಡನ ಹೆಸರು - ಚನ್ನಬಸಪ್ಪ
ವಯಸ್ಸು - 63 ವರ್ಷಗಳು
ಉದ್ಯೋಗ - ನಿವೃತ್ತ ನೌಕರರು
ವಾಸ ಸ್ಥಳ - ಹೊರಡೂರ.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.

ದಿ- 09-07-2015 ರಂದು ಸವಣೂರಿನ ಲಾಲಶಾಕಟ್ಟಿಯಲ್ಲಿರುವ ಸಲೀಂ ಕ್ಲಿನಿಕದಲ್ಲಿ ಸಹಿ ಮಾಡಿದ್ದೇನು. ಸಾಕ್ಷಿ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು ಅದು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಕೊನೆಯ ಪುಟದಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆ ದಿನ ನಾನು,ಚಾಸಾ-1,3 ರಿಂದ 8 ಸದರಿ ಜಾಗಕ್ಕೆ ಹೋಗಿದ್ದೇವು. ಅಲ್ಲಿಗೆ ಚಾಸಾ-4 ರವರು ನಮಗೆ ಬರಲು ಹೇಳಿದ್ದರು. ಅಲ್ಲಿ 48 ವಿವಿಧ ನಮೂನೆಯ ಔಷಧಿ, ಉಪಕರಣಗಳನ್ನು ಜಪ್ತಿಪಡಿಸಿಕೊಂಡರು. ಸಾಕ್ಷಿ ಜಪ್ತಿಪಡಿಸಿಕೂಂಡ ಔಷಧಿ ಮತ್ತು ಉಪಕರಣಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ರಿಂದ 48 ಎಂದು ಗುರುತಿಸಲಾಗಿದೆ. ನಾವು ಅಲ್ಲಿಗೆ ಹೋದಾಗ ಬೆಳಿಗ್ಗೆ 11-45 ಗಂಟೆಯಾಗಿತ್ತು. ಅಲ್ಲಿ ಆಪಾದಿತನು ಮೇಹರುನಿಸ್ಸಾ ಎನ್ನುವರಿಗೆ ಚಿಕಿತ್ಸೆ ನೀಡುತ್ತಿದ್ದನು. ಚಾಸಾ-1 ಮತ್ತು 4 ರವರು ಅಪಾದಿತನಿಗೆ ತನ್ನ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ವಿಚಾರಿಸುತ್ತಿದ್ದರು. ಆ ದಿನ 3-30 ರಿಂದ 4-30 ಗಂಟೆಯವರೆಗೆ ಪಂಚನಾಮೆ ಮಾಡಿದ್ದಾರೆ.

ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದ

ನಿಪಿ--1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲಾ , ಮತ್ತು ನಾನು ಅದನ್ನು ಹೇಳಿ ಬರೆಸಿಲ್ಲ ಎಂದರೆ ಸರಿ. ಚಾಸಾ-4 ನಮ್ಮ ಮೇಲಾಧಿಕಾರಿ ಎಂದರೆ ಸರಿ. ಅವರು ಹೇಳಿದ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. 48 ನಮೂನೆಯ ಔಷಧಗಳ ಹೆಸರು ನನಗೆ ಹೇಳಲು ಆಗುವುದಿಲ್ಲ. ಆಸ್ಪತ್ರೆಯ ಒಳಗೆ ಫೊಟೋಗಳು ಮತ್ತು ಸಲಹೆ ಸೂಚನೆಯುಳ್ಳ ಫಲಕಗಳನ್ನು ಹಾಕಿದ್ದರು ಎಂದರೆ ನಾನು? ನೋಡಿಲ್ಲಾ. ಪಂಚನಾಮೆಯನ್ನು ನಮ್ಮ ಸಮಕ್ಷಮ ಬರೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಮೇಲೆ ಪ್ರತಿಯೊಂದು ಪುಟದ ಮೇಲೆ ಸಹಿ ಮಾಡಿದ್ದೇನೆ. ನಮ್ಮ ಸಹಿಗಳನ್ನು ಬಿಳಿ ಹಾಳೆಯ ಎಡ ಬದಿಯಲ್ಲಿ ಸಹಿ ಪಡೆದ ನಂತರ ನಿಪಿ-1 ನ್ನು ಬರೆದು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ-4 ರವರು ಆಸ್ಪತ್ರೆಯಲ್ಲಿದ್ದಾಗ ನಮಗೆ ಅಲ್ಲಿಗೆ ಬರಲು ತಿಳಿಸಿದ್ದರು. ನಾನು ಆಗ ಕೆಲಸದ ಅವಧಿಯಲ್ಲಿದ್ದೇನು. ಚಾಸಾ-4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.